ಡಬ್ಬಾದಾಗ ಜಾಗ ಸಿಗೋದ್ ಭಾಳ್ ಕಷ್ಟ. ಅಲ್ಲಿ ಭಾಳ ಕಾಂಪಿಟೇಷನ್ ಇರ್ತಾವ. ಅದ್ಕ ನಾ ಜನರಲ್ ಒಳಗ ಹತ್ಕೊತೀನಿ. ಅಲ್ಲಿ ಗುರಾವ್ ಆ್ಯಂಡ್ ಫೇರಾವ್ ಟೆಕ್ನಿಕ್ ಬಳಸಿ ಸೀಟ್ ಪಡ್ಕೊತೀನಿ. ಮೆಟ್ರೊದಾಗ ಕುಂತ ಯಾವ್ದಾರ್ ಗಂಡು ಗಬ್ರುನ ಕಣ್ಣಾಗ ಕಣ್ಣಿಟ್ ಐದ್ ಸೆಕೆಂಡ್ ನೋಡ್ರಿ ಸಾಕು. ಅಂವಂಗ ಈಗಾಗ್ಲೇ 20% ಪಾಪಪ್ರಜ್ಞೆ ಇರ್ತದ. ಇನ್ನ 80% ನೀವ್ ನೋಡ್ಡಿದ್ ಮ್ಯಾಲ್ ಹೆಚ್ಚಾಗ್ತದ. ಆ ಮೆಸೆಜ್ ಮೆದುಳಿಗೆ ತಾಗಿ ಆಮ್ಯಾಲ ಬ್ಯಾಕ್ ಬೋನಿಂದ ಟೇಲ್ ಬೋನಿಗೆ ತಾಗಿ ಅವ್ನ ಎದ್ ಬಿಡ್ತಾನ. ಆವಾಗ ಕುಂತ್ ಬಿಡ್ರಿ. ಅದು ಅವ್ನ ಪೇಮೆಂಟ್ ಸೀಟ್ ಅದ ಖರಿ, ಆದ್ರೆ ಅದ ನಿಮ್ಗ ನಿಮ್ ಮೆರಿಟ್ ಮೇಲೆ ಸಿಕ್ಕದ!.

bit.ly/2JOPFEj
bit.ly/2UUMcdX
bit.ly/3aYssLZ

## ಉರೂಜ್ ಅಶ್ಫಕ್

ಉರೂಜ್ ಮುಂಬೈನವರು. ಬರಹಗಾರ್ತಿ ಮತ್ತು ಕಾಮಿಡಿಯನ್. ಭಾರತದಲ್ಲಿ ಹಿಂದೂಗಳಲ್ಲಿ ಮುಸ್ಲಿಮರ ಬಗ್ಗೆ, ಮುಸ್ಲಿಮರಲ್ಲಿ ಹಿಂದೂಗಳ ಬಗ್ಗೆ ಒಂದಿಷ್ಟು ಪೂರ್ವಗ್ರಹಗಳಿವೆಯಷ್ಟೆ: ಅಂಥ ತಕರಾರುಗಳು ಹಿಂದೂಗಳು ಒಟ್ಟಾಗಿ ಮುಸ್ಲಿಮರ ಬಗ್ಗೆ ಮಾತಾಡುವಾಗ, ಮುಸ್ಲಿಮರು ಒಟ್ಟಾಗಿ ಹಿಂದೂಗಳ ಜೊತೆಗೆ ಮಾತಾಡುವಾಗ ಹೊರಬರುತ್ತವೆ. ಎರಡೂ ಕಡೆಯ ಪೂರ್ವಗ್ರಹಗಳು ಎಷ್ಟು ಪೊಳ್ಳು ಮತ್ತು ಹಾಸ್ಯಾಸ್ಪದ ಎಂಬುದನ್ನು ಉರೂಜ್ ಹೇಳುವುದನ್ನು ಕೇಳಿಸಿಕೊಳ್ಳುವಾಗ ಅರ್ಥವಾಗುವುದಲ್ಲದೆ, ನಕ್ಕೂ ನಕ್ಕು ಹೊಟ್ಟೆ ಹುಣ್ಣಾಗುವುದು ಗ್ಯಾರಂಟಿ. ಅಷ್ಟೇ ಅಲ್ಲ, ನಮ್ಮ ಮನಸ್ಸಿನೊಳಗಿನ ಪರಧರ್ಮ ದ್ವೇಷವೆಂಬ ನಂಜು ತುಸುವಾದರೂ ಇಳಿದಿರುತ್ತದೆ. ತನ್ನನ್ನು ತಾನು 'ನಿರೀಶ್ವರವಾದಿ' ಎಂದು ಹೇಳಿಕೊಳ್ಳುವ ಉರೂಜ್ ಅಶ್ಫಕ್, ಎರಡೂ ಧರ್ಮದ ಅನುಯಾಯಿಗಳ ಮೂರ್ಖತನವನ್ನು ಹಿಗ್ಗಾಮುಗ್ಗಾ ಜಾಡಿಸುತ್ತಾಳೆ.

youtu.be/EzJhTb564iA
youtu.be/MHy8qvfUYcU





## ನೀತಿ ಪಲ್ಟಾ

ನೀತಿ ಪಲ್ಟಾ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಶಿಕ್ಷಣ ಕಲಿತಿದ್ದು, ಜಾಹೀರಾತು ಕಂಪನಿಯಲ್ಲಿ 12 ವರ್ಷ ಕೆಲಸ ಮಾಡಿದ್ದಾರೆ. ನಂತರ ಡಿಡಿ ನ್ಯಾಷನಲ್ ಚಾನೆಲ್‌ನಲ್ಲಿ ಸ್ಕ್ರೀನ್ ಪ್ಲೇ ರೈಟರ್ ಆಗಿ ಕಾರ್ಯನಿರ್ವಹಿಸಿ, ಈಗ ಫುಲ್ ಟೈಮ್ ಸ್ಟಾಂಡ್ ಅಪ್ ಕಾಮಿಡಿಯನ್ ಆಗಿ ಗುರ್ತಿಸಿಕೊಂಡಿದ್ದಾರೆ. ಅವರು ಅಮೆಜಾನ್ ಪ್ರೈಮ್‌ನ 'ಆಲ್ಮೋಸ್ಟ್ ಸನ್ಸ್ಕಾರಿ' ವೆಬ್ ಟೀವಿ ಸೀರೀಸ್‌ನ ಕಾಮಿಡಿಯನ್ ಕೂಡ ಹೌದು.

ಭಾರತೀಯ ಮಧ್ಯಮವರ್ಗದ ಜೀವನಶೈಲಿ, ಸಂಸಾರ ತಾಪತ್ರಯಗಳು, ದಾಂಪತ್ಯದಲ್ಲಿನ ಪೇಚಾಟಗಳು ಇವರ ಕಾಮಿಡಿಯ ಮುಖ್ಯ ವಸ್ತುಗಳು. ಸಾಮಾನ್ಯವೆನ್ನಿಸುವ ಸಂಗತಿಗಳನ್ನೂ ತಮ್ಮ ಪಂಚಿಂಗ್ ಮೂಲಕ ಹಾಸ್ಯದ ಮೂಸೆಯಲ್ಲಿ ವಿಶೇಷವಾಗಿ ಕಾಣಿಸಬಲ್ಲ ಶಕ್ತಿ ನೀತಿ ಅವರಿಗಿದೆ.

youtu.be/sCOJ0Lfi51Q ಮತ್ತು youtu.be/_o_GAZMnmuM

ಇಲ್ಲಿ ಉಲ್ಲೇಖಿಸಿರುವ ನಗೆಮಣಿಯರಷ್ಟೇ ಅಲ್ಲ, ಸಾಕಷ್ಟು ಮಂದಿ ಮಹಿಳೆಯರು ಹಾಸ್ಯದ ಗರಡಿಮನೆಯಲ್ಲಿ ಗಮನಾರ್ಹ ತಾಲೀಮು ನಡೆಸಿದ್ದಾರೆ. ಕಾವ್ಯ ಸೀಮಾ ರಾವ್, ಶ್ರೀರೂಪಾ ಸೇನ್ ಗುಪ್ತಾ, ಖ್ಯಾತಿ ರಾಜ, ಪ್ರಗ್ನ್ಯಾ ಶರಾಫ್, ಸುಮುಖಿ ಸುರೇಶ್, ಸುಮೈರಾ ಶೈಕ್, ನಿವೇದಿತಾ, ಸುಪ್ರಿಯಾ ಜೋಷಿ, ಸುರಭಿ, ಝಾನ್ಸಿ, ಡ್ರಿಜಲ್, ಆಯುಷಿ, ಅನ್ವಿತಾ – ಹೀಗೆ ಸ್ಟ್ಯಾಂಡ್ ಅಪ್ ಕಾಮಿಡಿ ಜಗತ್ತಿನಲ್ಲಿ ಮಹಿಳೆಯರ ಸಂಖ್ಯೆ ಚಿಕ್ಕದಾಗಿದ್ದರೂ ಸದ್ದು ಜೋರಾಗಿಯೇ ಇದೆ. ಹೆಣ್ಣುಮಕ್ಕಳು ಹೀಗೆ ಮುಕ್ತವಾಗಿ ನಗೆಮದ್ದು ಹಂಚುತ್ತಾ ಹೋಗುವುದು, ಆ ಸದ್ದು ಹೆಚ್ಚುತ್ತಾ ಹೋಗುವುದು ಸಾಮಾಜಿಕ ಸ್ವಾಸ್ಥ್ಯದ ದೃಷ್ಟಿಯಿಂದ ಅಪೇಕ್ಷಣೀಯ.


ಓಂ ✝ ☪ ಸರ್ವೇಜನಃ ಸುಖಿನೋ ಭವಂತುಃ ಓಂ ✝ ☪
ಸಮಸ್ಯೆ ನಿಮ್ಮದು ಪರಿಹಾರ ನಮ್ಮದು

ಶ್ರೀ ಸಾಯಿಬಾಬ ಉಪಾಸಕರು
ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ
ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ
ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ
ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ.
9620444460
ಖಾಯಂ ಮನೆ ವಿಳಾಸ: ಶ್ರೀಬಾಲಾಜಿ ಜ್ಯೋತಿಷ್ಯಂ
ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.
ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.